ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 163/2020

.............................................................................

CW 10
PW 02

| | | |
|---|---|---|
| ಹೆಸರು | : | ಯಲ್ಲಾಲಿಂಗ ಕೊಣ್ಣೂರ |
| ತಂದೆಯ ಹೆಸರು | : | ಸಾಯಬಣ್ಣ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಪಿ ಎಸ್ ಐ |
| ವಾಸಸ್ಥಳ | : | ಮಂಗಳೂರು. |

ದಿನಾಂಕ 22-10-2024 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 10-11-2019 ರಿಂದ 24-03-2021 ರ ವರೆಗೆ ಹಳಿಯಾಳ ಪೊಲೀಸ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 10-11-2019 ರಂದು ಚಾಸಾ 9 ರವರಿಂದ ಕಡತವನ್ನು ಪಡೆದು ಪರಿಶೀಲಿಸಿ, ದಿನಾಂಕ 25-12-2019 ರಂದು ಅಬಕಾರಿ ಡಿಸಿ ಕಾರವರ ರವರು ಆದೇಶ ಕಳುಹಿಸಿದ್ದು, ಸದರಿ ಪ್ರಮಾಣ ಪತ್ರವನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ 29-01-2020 ರಂದು ಚಾಸಾ 8 ರವರಿಂದ ಎಫ್ ಎಸ್ ಎಲ್ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡು, ಸದರಿ ಎಫ್ ಎಸ್ ಎಲ್ ವರದಿ ಇದೇ ಇದ್ದು ಅದನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6 ಎಂದು ಗುರುತಿಸಲಾಯಿತು. ಮು.ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ಈಗ ನ್ಯಾಯಾಲಯದ ಮುಂದೆ ಮು.ಮಾ. 1 ರಿಂದ 7 ರಂತೆ ಇರುತ್ತವೆ. ಕೃತ್ಯ ಎಸಗಿದ ವ್ಯಕ್ತಿ ಈಗ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ.

ತನಿಖೆ ಪೂರ್ಣಗೊಳಿಸಿ ಅದೇ ದಿನ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ಚಾಸಾ 1 ನನ್ನ ಮೇಲಾಧಿಕಾರಿ ಎಂದರೆ ಸರಿ. ಮು.ಮಾ ಗಳ ಪೈಕಿ ಇರುವ ಮಧ್ಯ ಕಾನೂನು ಪ್ರಕಾರ ತಯಾರಾದ ಮಧ್ಯಗಳು ಎಂದರೆ ಸರಿ. ಅವುಗಳನ್ನು ಅಂಗಡಿಗಳಿಗೆ ಮಾರಾಟಕ್ಕಾಗಿ ಪೂರೈಸಲಾಗುತ್ತದೆ ಎಂದರೆ ಸಾಕ್ಷಿ ಕೇವಲ ಪಾಸ್ ಮೂಲಕ ಪೂರೈಸಬೇಕಾಗುತ್ತದೆ ಎನ್ನುತ್ತಾರೆ. ಮು.ಮಾ. ಗಳಂತಹ ಮಧ್ಯ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿ ಪರವಾನಿಗೆ ಇದ್ದರೆ ಮಾತ್ರ ಸಿಗುತ್ತವೆ ಎನ್ನುತ್ತಾರೆ. ಚಾಸಾ 1 ರವರು ನೀಡಿದ ದೂರಿಗೆ ಪೂರಕವಾಗಿ ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. ಗಳನ್ನು ಆರೋಪಿಯಿಂದ ಜಪ್ತುಪಡಿಸಿಕೊಳ್ಳದಿದ್ದರೂ ಸಹ ಸುಳ್ಳು ಎಫ್ ಎಸ್ ಎಲ್ ವರದಿ ನಾನೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗೋಸ್ಕರ ದಾಖಲಿಸಿಕೊಂಡ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಪ್ತುಪಡಿಸಿಕೊಂಡ ಮು.ಮಾ. ಗಳ ಕುರಿತು ನಾನು ಯಾವುದೇ ತನಿಖೆ ಕೈಗೊಂಡಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.